ಕೇಂದ್ರಸರ್ಕಾರದ್ದಾಗಲಿ, ರಾಜ್ಯಸರ್ಕಾರದ್ದಾಗಲಿ, ಯಾವುದೇ ಹಣ ಬಂದಿದ್ದನ್ನು ನಾವು ಸದುಪಯೋಗ ಮಾಡಿಕೊಳ್ಳಬೇಕು ಮತ್ತು ಅನೇಕ ಸಾರಿ ನಾವು ಕುಳಿತು ಸಣ್ಣಪುಟ್ಟ ಲೋಪದೋಷಗಳಿದ್ದರೆ, ಅದನ್ನು ಅಧಿಕಾರಿಗೆ ಹೇಳಿ ಸರಿಪಡಿಸುವುದೂ ಕೂಡ ಆಗಬೇಕು. ಇಲ್ಲದಿದ್ದರೆ, ಒಂದು ಕೆಲಸವೂ ಆಗುವುದಿಲ್ಲ. ನಾವೆಲ್ಲರೂ ಚುನಾವಣೆಗೆ ಹೋಗಿದ್ದೇವೆಂದು ಹೇಳಿ, ಅಧಿಕಾರಿಗಳೇ ಇದ್ದರು. ಫೆಬ್ರವರಿಯಿಂದ ಇಲ್ಲಿಯವರೆಗೆ ಹೆಚ್ಚು ಕಡಿಮೆ ಆರು ತಿಂಗಳು ಯಾವ ಕೆಲಸವೂ ಆಗಿಲ್ಲ. ಅವರು ಮಾಡಿದ್ದೇ ರಾಜ್ಯವಾಯಿತು. ಅದಕ್ಕೆ ಇದನ್ನು ತಕ್ಷಣ ತೆಗೆದುಕೊಳ್ಳುವುದಿದೆ. ನಾನೂ ಕೂಡ ಅವರಿಗೆ ಹೇಳುತ್ತೇನೆ. ಈ ಹಿಂದೆ ಕೆರೆಗಳಿಗೆ ಒತ್ತು ಏಕೆ ಕೊಟ್ಟಿದ್ದೇವೆಂದರೆ, ಬಡ್ಡೆಟರಿ ಪ್ರಾವಿಸನ್ ಸಣ್ಣ ನೀರಾವರಿಗೆ : ಬಹಳ ಕಡಿಮೆಯಿತ್ತು. ಅದಕ್ಕೆ ನಾವು ಕ್ಯಾಬಿನೆಟ್‌ಗೆ ಮೊರೆ ಹೋಗಿ ಸ್ಕೇರ್‌ಸಿಟಿ ಅಮೌಂಟ್ ಮತ್ತು ನಮ್ಮ ಇಲಾಖಾ ಅಮೌಂಟ್ ಅನ್ನು ಕೂಡ ಅದಕ್ಕೆ ಖರ್ಚು ಮಾಡಿ, ಆದಷ್ಟೂ ಕೆರೆಗಳನ್ನು ದುರಸ್ತಿ ಮಾಡಬೇಕೆಂದರೆ ಪ್ರತಿಯೊಂದು ತಾಲ್ಲೂಕಿನಲ್ಲೂ 4,5,6,10,20 ಕೆರೆಗಳು ದುರಸ್ತಿಯಾಗಬೇಕು. ಬಹುಶಃ ಇಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ದುರಸ್ತಿ ಮಾಡುವ ಕೆಲಸ ಹಿಂದೆಂದೂ ಕೂಡ ಆಗಿರಲಿಲ್ಲ. ಪುನಃ ಇದನ್ನು ಅವರು ದುರಸ್ತಿ ಮಾಡಬೇಕು. ನನಗನ್ನಿಸಿದಮಟ್ಟಿಗೆ, ಯಾವ್ಯಾವ ತಾಲ್ಲೂಕಿನಲ್ಲಿ ಏನು ಶಾಸಕರು ಇರುತ್ತಾರೋ, ಆ ಸಂಬಂಧಪಟ್ಟ ಶಾಸಕರನ್ನೂ ಕೂಡ ಕೇಳಿಕೊಂಡು ಪುನಃ ಟಾಸ್ಕ್‌ಫೋರ್ಸ್ ಕಮಿಟಿ ಮಾಡಿ, ಕೆಲಸ ಚಾಲನೆಯಲ್ಲಿದ್ದರೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಸುಮಾರು ಒಂದು ಲಕ್ಷ ನಲವತ್ತು ಸಾವಿರ ಮೆಟ್ರಿಕ್ ಟನ್ ಆಹಾರಧಾನ್ಯವನ್ನು ಒಬ್ಬ ಅಧಿಕಾರಿಯೂ ಎತ್ತುತ್ತಿಲ್ಲ. ಇದಕ್ಕೆ ಎತ್ತುವ ಹಾಗೆಯೂ ಮಾಡಬೇಕು ಮತ್ತು ಖರ್ಚೂ ಆಗಬೇಕು ಮತ್ತು ನಮಗೆ ಸಿಕ್ಕ 40 ಕೋಟಿ ರೂಪಾಯಿ ಉಳಿತಾಯವಾಗಿದ್ದೂ ಕೂಡ ಮಾರ್ಚಿ ತಿಂಗಳಲ್ಲಿ, ಎಲ್ಲರೂ ಚುನಾವಣೆಯಲ್ಲಿದ್ದ ಕಾರಣ, ಆ ಹಣ ಕೂಡ ಹೆಚ್ಚಿನ ರೀತಿಯಲ್ಲಿ ಉಪಯೋಗವಾಗಲಿಲ್ಲ. ಕೊನೆಗೆ, ತೊಂದರೆಯಾಗಿದೆ. ಒಟ್ಟಾರೆ, ತಾವು ಹೇಳಿದ ಸಲಹೆ ಉತ್ತಮವಾಗಿದೆ. ಅದಕ್ಕೆ ರೆವಿನ್ಯೂ ಸಚಿವರು ಸ್ಪಂದಿಸಿ, ಆದಷ್ಟು ಬೇಗನೆ ನಿರ್ಣಯ ತೆಗೆದುಕೊಳ್ಳುತ್ತಾರೆ ಎನ್ನುವ ಮಾತನ್ನು ಹೇಳುತ್ತೇನೆ.

ಅಫಜಲ್‌ಪುರ ತಾಲ್ಲೂಕಿನಲ್ಲಿ ಭೀಮಾ ನದಿಗೆ ಬ್ಯಾರೇಜ್ ನಿರ್ಮಾಣ

32 (177): ಶ್ರೀ ಪಾಟೀಲ್ ಎಂ.ವೈ. (ಅಫ್ಜಲ್‌ಪುರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಫಜಲ್‌ಪುರ ತಾಲ್ಲೂಕಿನಲ್ಲಿ ಭೀಮಾ ನದಿಯ ಮೇಲೆ ದೇವಲಗಾಣಗಾಪುರ ಹತ್ತಿರ ಬ್ಯಾರೇಜನ್ನು ಯಾವಾಗ ನಿರ್ಮಿಸಲಾಗುವುದು;

ಆ) ಅದರ ಅಂದಾಜು ವೆಚ್ಚು ಎಷ್ಟು; ಮತ್ತು ಎಷ್ಟು ಎಕರೆ ಭೂಮಿಗೆ ಅನುಕೂಲವಾಗುವುದು;

ಇ) ಮೂರು ಸಲ ಅಂದಾಜು ವೆಚ್ಚ ಹೆಚ್ಚಿಸಿರುವುದು ನಿಜವೇ;

ಈ) ಪ್ರಾರಂಭದ ವೆಚ್ಚ ಮತ್ತು ಈಗಿನ ವೆಚ್ಚ ಎಷ್ಟು;

ಉ) ಈ ಕೆಲಸದ ಗುತ್ತಿಗೆದಾರರು ಕೆಲಸ ಮಾಡದೆ ತಡೆಯೊಡ್ಡುವುದನ್ನು ನಿರ್ಬಂಧಿಸಲು ಇವರನ್ನು ಕಪ್ಪುಪೆಟ್ಟಿಗೆ ಸೇರಿಸಲಾಗುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಕಾಮಗಾರಿ ಪ್ರಗತಿಯಲ್ಲಿದ್ದು, ಟೆಂಡರ್ ಕರಾರಿನ ಪ್ರಕಾರ ದಿನಾಂಕ 24/9/04ಕ್ಕೆ ಕಾಮಗಾರಿ ಪೂರ್ಣಗೊಳ್ಳಬೇಕಾಗಿದೆ.

ಆ) ಅಂದಾಜು ಮೊತ್ತ 625.00 ಲಕ್ಷ ರೂ.ಗಳು. ಈ ಯೋಜನೆಯಿಂದ ನೀರಾವರಿಗೆ ಒಳಪಡುವ ಕ್ಷೇತ್ರ 4450 ಎಕರೆ.

ಇ) ವಿನ್ಯಾಸ ಹಾಗೂ ಆಯಾ ಸಾಲಿನ ದರಪಟ್ಟಿಗಳ ಅನುಸಾರ ಅಂದಾಜು ವೆಚ್ಚ ಪರಿಷ್ಕೃತಗೊಂಡಿದೆ.

ಈ) 1) ಕರ್ನಾಟಕ ಪ್ರದೇಶಾಭಿವೃದ್ಧಿ : 12.63 ಲಕ್ಷ ರೂ. ಮಂಡಳಿಯಿಂದ ಮಾಡಲಾದ ಪ್ರಾರಂಭಿಕ ವೆಚ್ಚ

2) ಈಗಿನ ವೆಚ್ಚ : 212.93 ಲಕ್ಷ ರೂ.

ಒಟ್ಟಾರೆ ವೆಚ್ಚ 225.56 ಲಕ್ಷ ರೂ

ಉ) ಟೆಂಡರ್ ಕರಾರಿನ ಅವಧಿ ದಿನಾಂಕ 24/9/04 ರವರೆಗೆ ಇರುವುದರಿಂದ, ಪ್ರಸ್ತುತದಲ್ಲಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ.ವೈ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನಿರಾಶಾದಾಯಕವಾಗಿ ಉತ್ತರ ನೀಡಿದ್ದಾರೆ. ಈ ಕೆಲಸ 24.9.04ರಂದು ಮುಗಿಯುತ್ತದೆಂದು ಹೇಳಿದ್ದಾರೆ. ಇನ್ನು ಎರಡು ತಿಂಗಳಲ್ಲಿ ಮುಗಿಯುವ ಕೆಲಸ ಇನ್ನೂ ಅದು ಮೇಲಕ್ಕೇ ಬಂದಿಲ್ಲ. ಬೇಸ್‌ಮೆಂಟ್ ಮೇಲೆ ಎದ್ದಿಲ್ಲ. ಮಾನ್ಯ ಮಂತ್ರಿಗಳು ಆ ಕೆಲಸವನ್ನು ನೋಡಲು ಭೇಟಿ ನೀಡಿದ್ದಾರೆ. ಅವರಿಗೆ ಗೊತ್ತಿದೆ. ಇನ್ನು ಎರಡು ತಿಂಗಳಲ್ಲಿ ಆ ಕೆಲಸ ಮುಗಿಯುತ್ತದೋ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಸುದೈವವೋ, ದುರ್ದೈವವೋ ಗೊತ್ತಿಲ್ಲ. ಭೀಮಾ ರಿವರ್ ಮೇಲಿರುವ ಅನೇಕ ಬ್ಯಾರೇಜಸ್, ಬ್ರಿಡ್ಜ್ ಕಂ ಬ್ಯಾರೇಜಸ್ ಕಂಪ್ಲೀಟಾಗಿವೆ. ಆದರೆ, ಶ್ರೀಮಾನ್ ಎಂ.ವೈ. ಪಾಟೀಲರು ಮತಕ್ಷೇತ್ರದಲ್ಲಿ ಇದೊಂದು ಕೆಲಸ ಮಾತ್ರ ಈಗ ಉಳಿದಿದೆ. ಇದು ಅವರ ಕಾಲುಗುಣವೋ, ನಮ್ಮ ಕಾಲುಗುಣವೋ ಗೊತ್ತಿಲ್ಲ. ಆದರೆ ಯಾವಾಗಲೂ ಅಪೂರ್ಣವಾಗಿ ಉಳಿದಿದೆ. ನಾನೂ ಕೂಡ ಹೋಗಿ ನೋಡಿದ್ದೇನೆ. ಅದರ ಅಂದಾಜು ಪಟ್ಟಿ ಕೂಡ ಈ ಹಿಂದೆ ಮಾಡಿದ್ದು, 6 ಕೋಟಿ 75 ಲಕ್ಷ ರೂಪಾಯಿಗಳು. ಇತ್ತೀಚೆಗೆ ಅದರ ಎಸ್ಟಿಮೇಟ್, ಎಕ್ಸ್‌ಪೆಂಡಿಚರ್ ಹೆಚ್ಚಾಗುತ್ತದೆ. ಸ್ಟೀಲ್ ಮತ್ತು ಇದರ ರೇಟ್ ಹೆಚ್ಚಿಗೆ ಇದೆ ಎಂದು ಹೇಳಿ ಅವರು ಸ್ವಲ್ಪ ಸ್ಲೋ ಮಾಡಿದ್ದಾರೆ. ಆದರೆ, ಟೆಂಡರ್ ಪ್ರಕಾರ ಟೈಂ ಸೆಪ್ಟೆಂಬರ್‌ರವರೆಗೆ ಇದೆ. ಅದಕ್ಕೆ ನಾವು ತಕ್ಷಣ ನೋಟೀಸ್ ಕೊಟ್ಟು ತೆಗೆಯಲಾಗುವುದಿಲ್ಲ. ಅವರಿಗೆ ಈಗಾಗಲೇ ಅನೇಕ ನೋಟೀಸ್ ಕೊಟ್ಟಿದ್ದೇವೆ. ಒಂದು ವೇಳೆ ಅವರು ಆ ಒಂದು ಸ್ಪಿಮ್ಯುಲೇಟೆಡ್ ಟೈಂನಲ್ಲಿ ಕೆಲಸ ಮಾಡದಿದ್ದರೆ, ಖಂಡಿತವಾಗಿಯೂ ಟೆಂಡರ್ ಕ್ಯಾನ್ಸಲ್ ಮಾಡಿ ಬೇರೆಯವರಿಗೆ ಒಪ್ಪಿಸುವುದನ್ನು ಮಾಡುತ್ತೇವೆ. ಆದರೆ, ಇನ್ನು 23 ತಿಂಗಳ ಟೈಂ ಇದೆ. ಈ ಮಧ್ಯದಲ್ಲಿ ನಾನೂ ಕೂಡ ಇನ್ನೊಂದು ಯೋಚನೆ ಮಾಡಿದ್ದೇನೆ. ನಮ್ಮ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಯಾವ್ಯಾವ ಹಂತದಲ್ಲಿ ಎಷ್ಟೆಷ್ಟು

ಕೆಲಸಗಳಾಗಬೇಕಾಗಿತ್ತು, ಆ ಕೆಲಸ ಆಗಿಲ್ಲವೆಂದು ಹೇಳಿದಾಗ, ಅದರ ಬಗ್ಗೆ ಎಗ್ಸಾಮಿನ್ ಮಾಡಿ ಈ ಹಂತದಲ್ಲಿ ಇಷ್ಟೊಂದು ಕೆಲಸವಾಗಬೇಕಾಗಿತ್ತು ಅಥವಾ ಇಷ್ಟು ತಿಂಗಳಲ್ಲಿ ಇಷ್ಟು ಪ್ರೋಗ್ರೆಸ್ ಆಗಬೇಕಾಗಿತ್ತು, ಆಗಿಲ್ಲವೆಂದು ಹೇಳಿ, ಒಂದು ದಿಕ್ಕಿನಲ್ಲಿ ಯೋಚಿಸಿ, ನೋಟೀಸ್ ಕೊಟ್ಟು, ಆ ಒಂದು ಪ್ರೋಗ್ರೆಸ್ ರಿಪೋರ್ಟ್ ಮೇಲೆ ನೀವು ಆಕ್ಷನ್ ತೆಗೆದುಕೊಳ್ಳಿ ಎನ್ನುವ ಬಗ್ಗೆ ಕೂಡ ನಾನು ಸೂಚನೆ ಕೊಟ್ಟಿದ್ದೇನೆ. ಇದು ಬಹಳ ನಿಧಾನವಾಗಿದೆ. ಇದನ್ನು ನಾನು ಒಪ್ಪುತ್ತೇನೆ. ಆದರೆ, ಆದಷ್ಟು ಬೇಗನೆ ಇದನ್ನು ಕಟ್ಟಿ ಮುಗಿಸುವ ಪ್ರಯತ್ನ ಮಾಡುತ್ತೇನೆ. ಏಕೆಂದರೆ, ಒಂದ ಕಡೆ ಎಂ.ವೈ. ಪಾಟೀಲರ ಮತ ಕ್ಷೇತ್ರ, ಇನ್ನೊಂದು ಕಡೆ ಮಾನ್ಯ ಮುಖ್ಯಮಂತ್ರಿಯವರ ಮತ ಕ್ಷೇತ್ರ. ಮುಖ್ಯಮಂತ್ರಿಯವರಿಗೆ ಇವರಿಬ್ಬರಿಗೂ ಸಂಪರ್ಕ ಮಾಡಬೇಕಾದರೆ ಇದು ಬಹಳ ಅವಶ್ಯಕತೆ ಇದೆ. ಆದಷ್ಟು ಬೇಗ ಮಾಡಿಸುವ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ವೈ. ಪಾಟೀಲ್ : 13 ವರ್ಷಗಳಾಯಿತು. ಯಾದಗಿರಿಯಲ್ಲಿ 2 ವರ್ಷಗಳೊಳಗೆ ಬ್ಯಾರೇಜುಗಳನ್ನು ಮುಗಿಸಿದ್ದಾರೆ. ಆದರೆ, ಇಲ್ಲಿ 13 ವರ್ಷಗಳಾಯಿತು. ಮಾನ್ಯ ಖರ್ಗೆಯವರು ಸಮರ್ಥ ಆಡಳಿತಗಾರರಾಗಿದ್ದಾರೆ; ಆದರೆ, 13 ವರ್ಷ ನಾವು ಹೇಗೆ ತಾಳಿಕೊಂಡಿರಬಹುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದಕ್ಕೇ ನಾನು ಹೇಳಿದೆ, ಅವರ ಕಾಲುಗುಣವೋ ನಮ್ಮ ಕಾಲುಗುಣವೋ ಗೊತ್ತಿಲ್ಲ. ಆ ಕಡೆ ಎಲ್ಲಾ ಮುಗಿದಿದೆ. ಇಲ್ಲಿ ಹೀಗಾಗಿದೆ. ಆದರೂ ಕೂಡ, ಮುಖ್ಯಮಂತ್ರಿಯವರು ಇದರ ಬಗ್ಗೆ ಆಸಕ್ತಿ ವಹಿಸಿದ್ದಾರೆ. ಏಕೆಂದರೆ, ಅವರ ಮತಕ್ಷೇತ್ರಕ್ಕೆ ಹೋಗುವುದಕ್ಕೆ ಹೆಚ್ಚು ಕಡಿಮೆ 20 ಕಿ.ಮೀ. ಕಡಿಮೆಯಾಗುತ್ತದೆ. ಅದಕ್ಕಾಗಿ ಆದಷ್ಟು ಬೇಗ ಇದನ್ನು ಪೂರೈಸುವ ಕೆಲಸ ಮಾಡುತ್ತೇನೆ.

ಶ್ರೀ ಎಂ.ವೈ. ಪಾಟೀಲ್ : 13 ವರ್ಷ ಕೆಲಸ ಮಾಡಿಲ್ಲವೆಂದಾದರೆ, ಗುತ್ತಿಗೆದಾರರನ್ನು ಬ್ಲ್ಯಾಕ್‌ಲಿಸ್ಟ್‌ನಲ್ಲಿ ಇಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಬ್ಲ್ಯಾಕ್‌ಲಿಸ್ಟ್‌ಗೆ ಹೋಗಲೆಂದು ನಿಮ್ಮ ಉದ್ದೇಶವಿದೆ. ಆದರೆ ತಮಗೆ ಗೊತ್ತಿದ್ದ ಹಾಗೆ, ಇದಕ್ಕೆ ಹಣವಿರಲಿಲ್ಲ. ನಾನು ಇದನ್ನು ನಬಾರ್ಡಿನಲ್ಲಿ ಸೇರಿಸಿ, ಹಣವನ್ನು ಸಂಪೂರ್ಣವಾಗಿ ಒದಗಿಸಿಕೊಟ್ಟಿದ್ದೇನೆ. ಆದರೆ, ಆದಷ್ಟು ಬೇಗ ಮಾಡಬೇಕೆಂದು ಹೇಳಿ ನಮ್ಮ ಪ್ರಯತ್ನವಿದೆ. ಒಂದು ವೇಳೆ ಮಾಡದೇ ಹೋದರೆ ಡೆಫಿನೆಟ್‌ಲಿ, ಬ್ಲ್ಯಾಕ್‌ಲಿಸ್ಟ್‌ಗೆ ಸೇರಿಸಿ, ಹೊಸ ಟೆಂಡರ್ ಕಾಲ್-ಫಾರ್ ಮಾಡಿ, ಬೇರೆಯವರಿಗೆ ಒಪ್ಪಿಸೋಣ.

ಬೆಳ್ತಂಗಡಿ ತಾಲ್ಲೂಕಿನ ಲೋಕೋಪಯೋಗಿ ರಸ್ತೆಗಳು

33 (118): ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯ ರಸ್ತೆಗಳು ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇವುಗಳ ದುರಸ್ತಿಗೆ ಕೈಗೊಂಡ ಕ್ರಮಗಳೇನು;

ಇ) ಸಂಚಾರಕ್ಕೆ ಅನಾನುಕೂಲ ಪರಿಸ್ಥಿತಿಯಲ್ಲಿರುವ ಬೆಳ್ತಂಗಡಿ-ಬಂಗಾಡಿ-ಕಿಲ್ಲೂರು-ಕಾಜೂರು ರಸ್ತೆ, ಉಜಿರೆ-ಚಾರ್ಮಾಡಿ ಘಾಟಿ ರಸ್ತೆ, ಉಪ್ಪಿನಂಗಡಿ-ಗುರುವಾಯನಕೆರೆ ರಸ್ತೆ-